

# ಬಿದಿರಿಗೆ ಹೊಸ ಖದರ್

**ಬಿದಿರು ಮಗ್ಗುಲು ಬದಲಿಸಿದೆ, ವಿಶ್ವದ ಬೇಡಿಕೆಯ ವಾಣಿಜ್ಯ ಬೆಳೆ ಪಟ್ಟ ಅಲಂಕರಿಸುವ ತವಕದಲ್ಲಿದೆ. ಬಿದಿರುಪೇಟೆಯಲ್ಲಿ ಭಾರತಕ್ಕೂ ಅವಕಾಶಗಳು ವಿಪುಲವಾಗಿವೆ.**

**■ ಕೃಷ್ಣಿ ಶಿರೂರ**



ಸಾಂಪ್ರದಾಯಿಕ ಬಳಕೆಗೆ ಮಾತ್ರ ಸೀಮಿತವಾಗಿದ್ದ ಬಿದಿರು ಇಂದು ಉದ್ಯಮ ರೂಪದಲ್ಲಿ ಹೊರಹೊಮ್ಮುತ್ತಿದೆ. ಭವಿಷ್ಯದ ವಾಣಿಜ್ಯಿಕ ಬೆಳೆ ಎಂದು ವಿಶ್ವಮಾನ್ಯ ಪಟ್ಟ ಸ್ವೀಕರಿಸಲು ಹೊರಟಿರುವ ಬಿದಿರು, ವಿಶ್ವದ ಅತ್ಯುತ್ತಮ ನೈಸರ್ಗಿಕ ಎಂಜಿನಿಯರಿಂಗ್ ವಸ್ತುಗಳಲ್ಲಿ ಒಂದಾಗಿದೆ. ಜಾಗತಿಕವಾಗಿ ಬಿದಿರಿಗೆ ಬೇಡಿಕೆ ಹೆಚ್ಚುತ್ತಿದೆ. ಬಿದಿರಿನ ಬೇಡಿಕೆ ಮತ್ತು ಉದ್ಯಮಗಳಲ್ಲಿ ಬಳಸುತ್ತಿರುವ ಪ್ರಮಾಣವನ್ನು ಗಮನಿಸಿ ಜಾಗತಿಕ ಮಾರುಕಟ್ಟೆಯ ತಜ್ಞರು, 2026ರ ವೇಳೆಗೆ 22.86 ಶತಕೋಟಿ ಡಾಲರ್ ವಹಿವಾಟು ನಡೆಸಬಹುದೆಂದು ಅಂದಾಜು ಮಾಡಿದ್ದಾರೆ.

ಭಾರತ ಸರ್ಕಾರದ ಅಧೀನದಲ್ಲಿರುವ 'ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್' ಜೀವನೋಪಾಯಗಳ ಉಪವಲಯಗಳ ಪಟ್ಟಿಯಲ್ಲಿ ಬಿದಿರನ್ನು ಸೇರ್ಪಡೆಗೊಳಿಸಿದೆ; ಮುಂದಿನ ಐದು ವರ್ಷಗಳಲ್ಲಿ ಗ್ರಾಮೀಣ ಭಾಗದ 10 ಲಕ್ಷ ಮಹಿಳಾ ಸಣ್ಣ ಹಿಡುವಳಿದಾರರಿಗೆ ಬಿದಿರು ಬೆಳೆದು ಒಂದು ಲಕ್ಷ ರೂಪಾಯಿ ವಾರ್ಷಿಕ ಆದಾಯ ಗಳಿಸುವ ಯೋಜನೆಯನ್ನು ಇತ್ತೀಚೆಗೆ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನಿರ್ಣಯಿಸಿದೆ.

ಕರ್ನಾಟಕವೂ ಸೇರಿದಂತೆ 12 ರಾಜ್ಯಗಳು ಈ ಯೋಜನೆಗೆ ಚಾಲನೆ ನೀಡಲು ಮುಂದೆ ಬಂದಿವೆ. ಬೆಂಗಳೂರಿನ 'ಇಂಡಸ್–ಟ್ರೀ' ಫೌಂಡೇಷನ್ ಎಂಬ ಸಂಸ್ಥೆ ಈ ಯೋಜನೆಯನ್ನು ರಾಷ್ಟ್ರಮಟ್ಟದಲ್ಲಿ ಸಾಕಾರಗೊಳಿಸಲು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಜೊತೆಗೆ ಕೈಜೋಡಿಸಿದೆ. ಈಗಾಗಲೇ ಈ ಸಂಸ್ಥೆಯು ಕರ್ನಾಟಕದ 1800 ಹಾಗೂ ಮಹಾರಾಷ್ಟ್ರದ 3500 ಸಣ್ಣ ಹಿಡುವಳಿದಾರರೊಂದಿಗೆ ಕಳೆದ ಮೂರು ವರ್ಷಗಳಿಂದ ಬಿದಿರಿನ ಬೇಸಾಯ ಆರಂಭಿಸಿದೆ.

ರಾಜ್ಯದ ಮೊದಲ 'ಕಣಜ' ಬಿದಿರು ರೈತ ಉತ್ಪಾದಕ ಸಂಘವು ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ ಹಾಗೂ ಸೊರಬ ತಾಲ್ಲೂಕುಗಳಲ್ಲಿ 800 ರೈತರ ಜಮೀನುಗಳಲ್ಲಿ ಬಿದಿರನ್ನು ಬೆಳೆಸುತ್ತಿದೆ. ಹಾಸನ